ಸೋರಿಕೆ ಆಗುತ್ತಿತ್ತು. ಸೋರಿಕೆ ತಡೆಗಟ್ಟುವ ದೃಷ್ಟಿಯಿಂದ ನಾವು ರೋಸ್ಟರ್ ಸಿಸ್ಟಮ್ ಮಾಡಲಾಯಿತು, ಈಗ ಸೋರಿಕೆ ಕಡಿಮೆಯಾಗಿದೆ. ಇದರ ಜೊತೆಗೆ ಏನು ಸುಧಾರಣೆಯಾಗಬೇಕು, ಯಾವ ರೀತಿ ಬಸ್ ನಿಗದಿಯಾದ ಅವಧಿಗೆ ಹೊರಡಬೇಕು, ಅದರ ಪ್ರಕಾರ ಇವೊತ್ತಿನ ತನಕ ಆಗುತ್ತಿದೆ. ಈ ರೀತಿ ಮಾಡಿದ್ದರಿಂದ ಸ್ವಲ್ಪ ದಿವಸ ಪ್ರತಿಭಟನೆ ಕೇಳಿ ಬಂತು. ಮನುಷ್ಯನಿಗೆ ಯಾವ ರೀತಿ ಸ್ವತಂತ್ರವಿರುತ್ತದೋ, ಹೊಸ ಪದ್ಧತಿ ಜಾರಿಗೆ ತರುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಇದಕ್ಕೆ ಕಾರ್ಮಿಕ ಸಂಘಟನೆಯವರು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿದರು, ಇದೆಲ್ಲವನ್ನೂ ನಾವು ನಿವಾರಣೆ ಮಾಡಿದ್ದೇವೆ, ಅವರಿಗೂ ಇದು ಗೊತ್ತಾಗಿದೆ. ರೋಸ್ಟರ್ ಸಿಸ್ಟಮ್ ಮಾಡುವುದರಿಂದ ಒಳ್ಳೆಯ ಅನುಕೂಲಗಳಿವೆ. 68 ಕಾರ್ಪೊರೇಷನ್‌ಗಳಲ್ಲಿ ಈ ಪದ್ಧತಿ ಇದೆ. ಇಲ್ಲಿ ಎಕ್ಸ್‌ಪ್ಲೆನ್ ಮಾಡಲು ಆಗುವುದಿಲ್ಲ, ಆ ದೃಷ್ಟಿಯಿಂದ ರೋಸ್ಟರ್ ಸಿಸ್ಟಮ್ ಮಾಡಿದ್ದೇವೆ, ಇವೊತ್ತು ಸರಿಯಾದ ರೀತಿಯಲ್ಲಿ ವಾಹನಗಳ ಸಂಚಾರ ನಡೆಸುವ ಹಂತದಲ್ಲಿದ್ದೇವೆ, ಇದರಿಂದ ಸಂಸ್ಥೆಯನ್ನು ಲಾಭದಾಯಕವಾಗಿ ಮಾಡಬಹುದೆಂದು ಹೇಳುತ್ತಿದ್ದೇನೆ.

ಕಲಘಟಗಿ ನಗರದಲ್ಲಿ ಬಸ್ ಡಿಪೋ ತೆರೆಯುವುದು

465 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಶ್ರೀ ಪಿ.ಸಿ. ಸಿದ್ಧನಗೌಡರ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಸರಿಯಾಗಿ ಕೊಡದೆ ತಪ್ಪು ಉತ್ತರ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರಿಸಿದ್ದಾರೆ. ಈ ಬಗ್ಗೆ ಪರಿಶೀಲಿಸುತ್ತೇವೆಂದು ಹಿಂದೆ ಹೇಳಿದ್ದರು. ಅದಕ್ಕೆ ಇನ್ನೊಂದು ಪ್ರಶ್ನೆ ಕೇಳಿದಾಗ ತಪ್ಪು ಮಾಹಿತಿ ಏನು ಕೊಡುತ್ತಿದ್ದಾರೆ. ಇದಕ್ಕೊಂದು ಉದಾಹರಣೆ ಕೊಡುತ್ತಿದ್ದೇನೆ. ನಗರದಲ್ಲಿ ಬಸ್ ನಿಲ್ದಾಣ ಸೌಕರ್ಯವಿಲ್ಲವೆಂದು ಕೇಳಿದರೆ, ಇಲ್ಲ ಎಂದು ಉತ್ತರ ಕೊಡುತ್ತಾರೆ. ಇದರ ಜೊತೆಗೆ ಒದಗಿಸಿಲಾಗಿದೆ ಎಂದೂ ಕೊಟ್ಟಿದ್ದಾರೆ. ಇದರಲ್ಲಿ ಮಾಹಿತಿ ಯಾವುದು ತಿಳಿದುಕೊಳ್ಳಬೇಕೆಂಬುದರ ಬಗ್ಗೆ ಸಂಶಯ ಬಂದಿದೆ. ಆದುದರಿಂದ, ಕಲಘಟಗಿ ನಗರಕ್ಕೆ ಬಸ್ ಡಿಪೋ ತೆರೆಯುವ ಕುರಿತು ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ: ನೀವು ಕೇಳಿದ ಮಾಹಿತಿಗೆ ನಾವು ಉತ್ತರ ನೀಡಿದ್ದೇವೆ. ತಾವು ಭೂಮಿಯನ್ನು ಕೊಡಿಸುವುದಾದರೆ ಆ ನಗರದಲ್ಲಿ ಬಸ್ ಡಿಪೋ ತೆರೆಯುವ ಕುರಿತು ಅಲೋಚಿಸಬಹುದು. ಆದರೆ, ಇವೊತ್ತಿನ ಪರಿಸ್ಥಿತಿಯಲ್ಲಿ there is no necessity for any bus-stand there.

ಶ್ರೀ ಪಿ.ಸಿ. ಸಿದ್ಧನಗೌಡರ್: ನಾನು ಕೇಳಿರುವ ಪ್ರಶ್ನೆಗೆ ಒದಗಿಸಿರುವ ಉತ್ತರ ಸರಿಯಿಲ್ಲವೆಂದು ಹೇಳುತ್ತಿದ್ದೇನೆ. ಪ್ರಸ್ತಾವ ಸರ್ಕಾರದ ಗಮನದಲ್ಲಿದ್ದು, ಪರಿಶೀಲಿಸಲಾಗುತ್ತಿದೆ ಎಂದು ಹೇಳಿ ಈಗ ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನನ್ನ ಪಾಯಿಂಟ್ ಏನೆಂದರೆ, ಬೇರೆ ತಾಲ್ಲೂಕಿಗೆ ಬಸ್ ಡಿಪೋ ಒದಗಿಸಿಕೊಟ್ಟಿದ್ದೀರಿ,

ಆದರೆ, ನಮಗೆ ಅಂದರೆ ವಿರೋಧ ಪಕ್ಷದವರು ಕೇಳಿರುವುದಕ್ಕೆ ಕೊಟ್ಟಿಲ್ಲವೆಂದು ಹೇಳುತ್ತಿದ್ದೇನೆ. ಈ ಕುರಿತು ಅನೇಕ ಪ್ರಸ್ತಾವನೆಗಳಿದ್ದವು, ಬೇರೆ ಕಡೆ ಬಸ್ ಡಿಪೋಗಳನ್ನು ಕೊಟ್ಟಿದ್ದೀರಿ. ನಿಮ್ಮ ಪಕ್ಷಕ್ಕೆ ಸೇರಿದವರು ಕೇಳಿದರೆ ಮಾತ್ರ ಕೊಡಬೇಕೆಂದು ಏನಾದರೂ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ: ಎಲ್ಲೆಲ್ಲಿ ಬಸ್ ಡಿಪೋಗಳ ಅಗತ್ಯವಿದೆಯೋ ಅಲ್ಲೆಲ್ಲಾ ಒದಗಿಸಿಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಪಿ.ಸಿ. ಸಿದ್ದನಗೌಡರ್: ಕಲಘಟಗಿ ನಗರದಲ್ಲಿ ವರ್ಕ್‌ಲೋಡ್ ಜಾಸ್ತಿ ಇರುವುದರಿಂದ ಬಸ್ ಡಿಪೋ ತೆರೆಯಬೇಕೆಂದು ಕೇಳುತ್ತಿದ್ದೇನೆ.

ದಂತಚೋರ ವೀರಪ್ಪನ್‌ನನ್ನು ಬಂಧಿಸುವುದು

517 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಂತಚೋರ ಕೊಲೆ ಗಡುಕ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಇದುವರೆಗೆ ಸರ್ಕಾರ ಸಾಧಿಸಿರುವ ಪ್ರಗತಿ ಏನು?

ಆ) ವೀರಪ್ಪನ್‌ನನ್ನು ಹಿಡಿಯಲು ನೇಮಿಸಿರುವ ಗಡಿಭದ್ರತಾ ಪಡೆಗೆ ಇದುವರೆಗೂ ಆಗಿರುವ ಹಣದ ವೆಚ್ಚವೆಷ್ಟು?

ಇ) ವೀರಪ್ಪನ್‌ನಿಂದ ಇದುವರೆವಿಗೂ ಆಗಿರುವ ಪ್ರಾಣಹಾನಿ ಎಷ್ಟು? ಹಾಗೂ ಆಸ್ತಿಪಾಸ್ತಿಗಳಿಗೆ ಎಷ್ಟು ನಷ್ಟ ಒದಗಿಸಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ದಿನಾಂಕ 20-3-1994ರ ವರೆಗೆ ವೀರಪ್ಪನ್ ತಂಡದ 53 ಸದಸ್ಯರು ಸೇರಿದಂತೆ ಒಟ್ಟು 197 ಜನರನ್ನು ಬಂಧಿಸಲಾಗಿದೆ. ಬಂಧಿತ 197 ಜನರಲ್ಲಿ 60 ಮಂದಿ ವೀರಪ್ಪನ್ ತಂಡದ ಸದಸ್ಯರಿದ್ದು, ಉಳಿದ 137 ಜನರು ವೀರಪ್ಪನ್ ತಂಡಕ್ಕೆ ಆಹಾರ ಪದಾರ್ಥಗಳನ್ನು ಪೂರೈಸುವವರಾಗಿರುತ್ತಾರೆ. ಈ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಶಾಂತಿ ಸುವ್ಯವಸ್ಥೆಯನ್ನು ಪುನರ್ ಸ್ಥಾಪಿಸಲಾಗಿದೆ.

ಆ) ಗಡಿ ಭದ್ರತಾ ಪಡೆಗೆ ಪ್ರತಿ ತಿಂಗಳೂ ರೂ. 10.51 ಲಕ್ಷ ದಂತೆ ದಿನಾಂಕ 9-3-94ರ ವರೆಗೆ ಕೇಂದ್ರ ಸರ್ಕಾರಕ್ಕೆ ಒಟ್ಟು ರೂ. 94,59,000-00 ಗಳನ್ನು ಸಂದಾಯ ಮಾಡಬೇಕಾಗಿದೆ. ಇನ್ನು ಮುಂದೆ ಕಾರ್ಯಾಚರಣೆ ಮುಗಿಯುವವರೆಗೆ ಪ್ರತಿ ತಿಂಗಳು ರೂ. 4,20,000 ರಂತೆ ಸಂದಾಯ ಮಾಡಬೇಕಾಗುವುದು.

ಇ) ಇಲ್ಲಿಯವರೆಗೆ 94 ಜನರ ಪ್ರಾಣ ಹಾನಿಯಾಗಿದೆ. ಇದರಲ್ಲಿ 28 ಜನ ಪೋಲೀಸ್ ಅಧಿಕಾರಿಗಳಾಗಿದ್ದು, 10 ಮಂದಿ ಅರಣ್ಯ ಅಧಿಕಾರಿಗಳು ಹಾಗೂ 56 ಜನರು ಸಾರ್ವಜನಿಕರು ಸೇರಿದ್ದಾರೆ.

ದಂತ ಕಳ್ಳ ಸಾಗಾಣಿಕೆಯಿಂದ ಒಟ್ಟು 8 ಕೋಟಿ ರೂ. ಹಾಗೂ ಶ್ರೀಗಂಧ ಕಳ್ಳ ಸಾಗಾಣಿಯಿಂದ 125 ಕೋಟಿ ರೂ.ಗಳಷ್ಟು ಆಸ್ತಿ ನಷ್ಟವಾಗಿದ್ದು, ಮತ್ತು ಸಾರ್ವಜನಿಕರಿಂದ 84 ಲಕ್ಷ ರೂ.ಗಳನ್ನು ಬಲಾತ್ಕಾರವಾಗಿ ವಸೂಲಿ ಮಾಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಈ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪವಾಗಿದ್ದರೂ ಸರಿಯಾದಂಥ ಉತ್ತರ ದೊರಕದಿರತಕ್ಕಂಥಾದ್ದು ದುರ್ದೈವ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಏನೆಂದರೆ, ಆ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಶಾಂತಿ ಸುವ್ಯವಸ್ಥೆ ಕಾಪಾಡಲಾಗಿದೆಯೆಂದು ತಿಳಿಸಿದ್ದಾರೆ. ಅಂದರೆ, ಒಂದು ವರ್ಷದಿಂದ ಅಲ್ಲಿ ಏನೂ ನಡೆದಿಲ್ಲವೆ? ಗಲಾಟೆ ನಡೆದಿಲ್ಲವೆ? ಯಾರನ್ನೂ ಕೊಂದಿಲ್ಲವೆ? ಕಳ್ಳ ಸಾಗಾಣಿಕೆ ನಡೆದಿಲ್ಲವೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ